


ಅಂಗಡಿಗೆ ಹೋಗಿ ನೀವು 'ಒಂದು ಬಿಸ್ಲೇರಿ ಕೊಡಿ' ಎನ್ನುತ್ತೀರಿ. ಆತ ಒಂದು 'ಕಿನ್ಲೇ' ಅಥವಾ 'ಬಿಂದು' ಅಥವಾ 'ರೈಲ್‌ನೀರ್' ಕುಡಿಯುವ ನೀರಿನ ಬಾಟಲ್ ಕೊಡುತ್ತಾನೆ. ಆದರೆ ನೀವು ಯಾವ ಆಕ್ಷೇಪವನ್ನೂ ವ್ಯಕ್ತಪಡಿಸುವುದಿಲ್ಲ. ಆತ ಕೊಟ್ಟ ಬಾಟಲಿ ನೀರನ್ನು ಪಡೆದು ದುಡ್ಡು ಕೊಟ್ಟು ಹೊರಟು ಬಿಡುತ್ತೀರಿ. ನೀವು ಕೇಳಿದ್ದು ಬಿಸ್ಲೇರಿ, ಆದರೆ ಆತ ಕೊಟ್ಟದ್ದು ಬೇರೆ ಬ್ರ್ಯಾಂಡ್. ಆದರೂ ನೀವು ಏಕೆ ಸುಮ್ಮನಿರುತ್ತೀರಿ? ಅದುವೇ ಬಿಸ್ಲೇರಿ ಬ್ರ್ಯಾಂಡ್‌ನ ಶಕ್ತಿ! ಇವತ್ತು 'ಬಾಟಲಿ ನೀರು' ಎಂದರೇ ಬಿಸ್ಲೇರಿ ಎನ್ನುವಷ್ಟು ಆ ಬ್ರ್ಯಾಂಡ್ ಜನಪ್ರಿಯವಾಗಿದೆ. ಬಾಟಲಿ ನೀರಿಗೆ ಬಿಸ್ಲೇರಿ ಎನ್ನುವುದೇ ಅನ್ವರ್ಥ ಎನ್ನುವಂತಾಗಿದೆ.

ಊರಿಗೆ ಫೋನ್ ಹಚ್ಚುತ್ತೀರಿ. ಅಲ್ಲಿ ನಿಮ್ಮ ಕಸಿನ್ ಮನೆ ಕಟ್ಟಿಸಲು ಹೊರಟಿದ್ದಾನೆ. 'ಏನಾಯ್ತಪ್ಪಾ ನಿನ್ ಮನೆ ಕೆಲಸ?' ಎಂದು ಪ್ರಶ್ನಿಸುತ್ತೀರಿ. 'ಜೆಸಿಬಿ ತಂದ್ ಪಾಯ ತೋಡ್ಸಾಕ್ ಎಲ್ಲಾ ಸಪಾಟ್ ಮಾಡೀನಿ ನೋಡಪಾ...' ಎನ್ನುತ್ತಾನೆ ಆತ. ಆತ ತಂದದ್ದು ಜೆಸಿಬಿ ಅಲ್ಲ, ಹಿಟಾಚಿ ಕಂಪೆನಿಯ ಮಣ್ಣು ಗೋರುವ ಯಂತ್ರ. ಆದರೆ ಆತನ ಪಾಲಿಗೆ ಅದುವೇ ಜೆಸಿಬಿ ಯಂತ್ರ. ಜೆಸಿಬಿ ಎನ್ನುವುದು ಒಂದು ಕಂಪೆನಿಯ ಹೆಸರು ಎಂದಾಗಲೀ, ಜೆಸಿಬಿ ಎನ್ನುವ ಅಕ್ಷರದ ಫುಲ್‌ಫಾರ್ಮ್ ಆಗಲೀ ಆತನಿಗೆ ಗೊತ್ತಿಲ್ಲ.

1945ರಲ್ಲಿ ಜೋಸೆಫ್ ಸಿರಿಲ್ ಬಾಮ್‌ಫರ್ಡ್ ಎಂಬಾತ ಸ್ಥಾಪಿಸಿದ, ಜೆಸಿ ಬಾಮ್‌ಫರ್ಡ್ ಎಕ್ಸ್‌ಕವೇಟರ್ಸ್ ಕಂಪೆನಿ ಇವತ್ತು 150ಕ್ಕೂ ಹೆಚ್ಚು ದೇಶಗಳಲ್ಲಿ ತನ್ನ ಮಣ್ಣು ಗೋರುವ, ಕಟ್ಟಡ, ಗುಡ್ಡೆಗಳನ್ನು ನೆಲಸಮ ಮಾಡುವ ಯಂತ್ರಗಳನ್ನು ಮಾರುತ್ತಿದೆ. ಏಷ್ಯಾ, ಅಮೆರಿಕ, ಯೂರೋಪ್‌ಗಳಲ್ಲಿ ಈ ಕಂಪೆನಿಯ 22 ಫ್ಯಾಕ್ಟರಿಗಳಿವೆ. ಈ ಕಂಪೆನಿಯು ಟ್ರ್ಯಾಕ್ಟರ್, ಡೀಸೆಲ್ ಎಂಜಿನ್ ಸಹಿತ 300 ವಿವಿಧ ಮಾದರಿಯ ಯಂತ್ರಗಳನ್ನು ಉತ್ಪಾದಿಸುತ್ತಿದೆ. ಆದರೆ ಅದು ಉತ್ಪಾದಿಸುವ ಮಣ್ಣು ಗೋರುವ ಯಂತ್ರ ಮಾಡಿದಷ್ಟು ಹೆಸರನ್ನು ಇನ್ಯಾವ ಕಂಪೆನಿಯ ಯಂತ್ರಗಳೂ ಮಾಡಲಾಗಿಲ್ಲ. ಎಲ್ಲಿಯವರೆಗೆ ಎಂದರೆ, ಆಕ್ಸ್‌ಫರ್ಡ್ ಇಂಗ್ಲಿಷ್ ಡಿಕ್ಷನರಿಯಲ್ಲಿ ನೀವು ಜೆಸಿಬಿ ಎನ್ನುವ ಶಬ್ದ ಹುಡುಕಿದರೆ, 'ಮಣ್ಣು ತೆಗೆಯುವ, ನೆಲಸಮ ಮಾಡುವ ಯಂತ್ರ' ಎಂಬ ಅರ್ಥವಿದೆ! ಅದು ಆ ಉತ್ಪನ್ನದ ಬ್ರ್ಯಾಂಡ್ ಪವರ್!

ಅಂಗಡಿಗೆ ಹೋಗಿ ನಿಮ್ಮ ಐಡಿ ಕಾರ್ಡ್ ಕೊಟ್ಟು 'ಜೆರಾಕ್ಸ್ ಮಾಡಿ' ಎನ್ನುತ್ತೀರಿ. ಆತ 'ಎಷ್ಟು ಕಾಪಿ?' ಎಂದು ಕೇಳುತ್ತಾನೆ. ನೀವು ಒಂದೋ, ಎರಡೋ ಹೇಳುತ್ತೀರಿ. ಆತ ಪ್ರತಿ ಮಾಡುತ್ತಾನೆ. ನೋಡಿದರೆ ಪ್ರತಿ ಮಾಡುವ ಆ ಯಂತ್ರ ಮೋದಿ ಕಂಪೆನಿಯದ್ದು ಅಥವಾ ಸ್ಯಾಮ್‌ಸಂಗ್ ಕಂಪೆನಿಯದ್ದು. ನೀವು ಕೇಳಿದ್ದು ಜೆರಾಕ್ಸ್. ನಿಮಗಾಗಲೀ, ಅಂಗಡಿಯವನಿಗಾಗಲೀ ಅದರ ವ್ಯತ್ಯಾಸ ಗೊತ್ತಾಗುವುದೇ ಇಲ್ಲ. ನಿಮ್ಮ ಪ್ರಕಾರ, ಜೆರಾಕ್ಸ್ ಅಂದರೆ ಕಾಪಿ ಮಾಡುವುದು, ಅಷ್ಟೆ. ಈಗ ಅದು ಕಂಪೆನಿಯ ಹೆಸರಲ್ಲ– ಅದೊಂದು ಕ್ರಿಯಾಪದ!

ಜೆರಾಕ್ಸ್ (xerox) ಎನ್ನುವ ಕಂಪೆನಿಯ ಬಗ್ಗೆ ನಿಮಗೆ ಗೊತ್ತಿದೆಯೆ? 1906ರಲ್ಲಿ ನ್ಯೂಯಾರ್ಕ್‌ನ ರೋಚೆಸ್ಟರ್‌ನಲ್ಲಿ ಆರಂಭವಾದ ಕಂಪೆನಿಯಿದು. ಆಗ ಈ ಕಂಪೆನಿಯ ಹೆಸರು 'ದಿ ಹೆಲಾಯ್ಡ್ ಫೋಟೊಗ್ರಾಫಿಕ್ ಕಂಪೆನಿ.' ಫೋಟೋಗ್ರಾಫಿ ಪೇಪರ್ ಮತ್ತು ಇತರ ಉಪಕರಣಗಳನ್ನು ಅದು ಉತ್ಪಾದಿಸುತ್ತಿತ್ತು. 1959ರಲ್ಲಿ ಈ ಕಂಪೆನಿ ಉತ್ಪಾದಿಸಿದ xerox 914 ಎನ್ನುವ 'ಪ್ಲೇನ್ ಪೇಪರ್ ಫೋಟೋ ಕಾಪಿ' ಯಂತ್ರ ಜಗತ್ತಿನಲ್ಲೇ ಅತಿ ದೊಡ್ಡ ಕ್ರಾಂತಿಯನ್ನು ಉಂಟು ಮಾಡಿತು. ಕಂಪೆನಿ ಆಗ ಹೊರಡಿಸಿದ ಜಾಹೀರಾತಿನಲ್ಲಿ 'ಬಟನ್ ಒತ್ತಿದರೆ ಸಾಕು, ಒಂದು ಕೋತಿ ಕೂಡಾ ನಿಮ್ಮ ಕಾಗದ ಪತ್ರಗಳ ಪ್ರತಿಯನ್ನು ತೆಗೆಯಬಹುದು' ಎಂದು ಪ್ರಚಾರ ಮಾಡಲಾಗಿತ್ತು.

ಈ ಫೋಟೊ ಕಾಪಿ ಯಂತ್ರ ಕಂಪೆನಿಯ ಭಾಗ್ಯದ ಬಾಗಿಲನ್ನು ಒದ್ದು ತೆರೆಯಿತು. 1961ರಲ್ಲಿ ವಾರ್ಷಿಕ 60 ದಶಲಕ್ಷ ಡಾಲರ್ ಇದ್ದ ಕಂಪೆನಿಯ ಆದಾಯ 1965ರ ವೇಳೆಗೆ 500 ದಶಲಕ್ಷ ಡಾಲರ್‌ಗೆ ಏರಿತು. ಈಗ ಕನೆಕ್ಟಿಕಟ್ ನಲ್ಲಿ ಕೇಂದ್ರ ಕಚೇರಿ ಸ್ಥಾಪಿಸಿರುವ ಕಂಪೆನಿ 160 ದೇಶಗಳಲ್ಲಿ ತನ್ನ ಕಚೇರಿ ಮತ್ತು ಘಟಕಗಳನ್ನು ಹೊಂದಿದೆ. ನ್ಯೂಯಾರ್ಕ್ ಷೇರು ಪೇಟೆಯಲ್ಲಿ ಸದಾ ಸುದ್ದಿಯಲ್ಲಿರುವ xerox corp ಆದಾಯ 2017ರಲ್ಲಿ 10,265 ಶತಕೋಟಿ ಡಾಲರ್ ದಾಟಿದೆ! ವಿಶ್ವದಾದ್ಯಂತ

**ಜಾಹೀರಾತಿನಲ್ಲಿ ವಿವಿಧ ಕ್ಷೇತ್ರದ ಸೆಲೆಬ್ರಿಟಿಗಳ ಪಾಲು**

